## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 295
ಸದಸ್ಯರ ಹೆಸರು : ಶ್ರೀ ಐವನ್ ಡಿ'ಸೋಜಾ
(ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 11.12.2024
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ದಕ್ಷಿಣ ಕನ್ನಡ, ಉಡುಪಿ ಮತ್ತು ಕೊಡಗು ಜಿಲ್ಲೆಗಳಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ನೀಡಿದ ಡಿ.ಸಿ ಮನ್ನಾ ಭೂಮಿಯನ್ನು ಇತರ ಸಮುದಾಯಗಳಿಗೆ ಬಳಕೆ ಆಗುತ್ತಿರುವ ಬಗ್ಗೆ ದೂರುಗಳಿದ್ದು, ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು; | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಿರಿಸಿದ ಡಿ.ಸಿ. ಮನ್ನಾ ಜಮೀನು ಇತರೆ ಸಮುದಾಯಗಳಿಗೆ ಬಳಕೆ ಆಗುತ್ತಿರುವ ಬಗ್ಗೆ ಸ್ವೀಕೃತವಾಗಿರುವ ದೂರುಗಳ ಬಗ್ಗೆ ಪರಿಶೀಲನೆ ನಡೆಸಲು ಸಂಬಂಧಿಸಿದ ತಹಶೀಲ್ದಾರರುಗಳಿಗೆ ನಿರ್ದೇಶನ ನೀಡಲಾಗಿರುತ್ತದೆ. ಕೊಡಗು ಜಿಲ್ಲೆಯಲ್ಲಿ ಡಿ.ಸಿ. ಮನ್ನಾ ಜಮೀನು ಇರುವುದಿಲ್ಲ. |
| (ಆ) | ದಕ್ಷಿಣ ಕನ್ನಡ, ಉಡುಪಿ ಮತ್ತು ಕೊಡಗು ಜಿಲ್ಲೆಗಳಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ ಮತ್ತು ಪಂಗಡಗಳಲ್ಲಿ ಸುಮಾರು 23 ಸಾವಿರ ಅರ್ಜಿಗಳು ವಿಚಾರಣೆಗೆ ಭೂಮಿ ನೀಡಲು ಬಾಕಿ ಇದ್ದು, ಇವುಗಳನ್ನು ಪರಿಶೀಲಿಸದೇ ಇರಲು ಕಾರಣಗಳೇನು; (ವಿವರ ನೀಡುವುದು) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಲಭ್ಯವಿರುವ ಡಿ.ಸಿ. ಮನ್ನಾ ಜಮೀನುಗಳನ್ನು ಅರ್ಹ ಫಲಾನುಭವಿಗಳಿಗೆ ಮಂಜೂರು ಮಾಡಲು ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ತಾಲೂಕು ಮಟ್ಟದ ಸಮಿತಿ ರಚಿಸಲಾಗಿದ್ದು, ಅರ್ಹ ಫಲಾನುಭವಿಗಳನ್ನು ಗುರುತಿಸಿ ಅರ್ಹರಿಗೆ ಆದ್ಯತೆ ಮೇರೆಗೆ ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಕೊಡಗು ಜಿಲ್ಲೆಯಲ್ಲಿ ಡಿ.ಸಿ. ಮನ್ನಾ ಜಮೀನು ಇರುವುದಿಲ್ಲವಾದ ಕಾರಣ ಅನ್ವಯಿಸುವುದಿಲ್ಲ. |
| | ಡಿ.ಸಿ ಮನ್ನಾ ಭೂಮಿಯನ್ನು ಇತರರಿಗೆ ಮತ್ತು ಬೇರೆ ಸಮುದಾಯರಿಗೆ ಮಂಜೂರು ಮಾಡಬಾರದೆಂದು ಪರಿಶಿಷ್ಟ ಜಾತಿ ಮತ್ತು ಪಂಗಡದವರು ಹೋರಾಟ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಭೂಮಿಯನ್ನು ಮಂಜೂರು ಮಾಡಲು ಸದರಿ ಜಿಲ್ಲೆಗಳಲ್ಲಿ ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು? (ವಿವರ ನೀಡುವುದು) | ಬಂದಿದೆ.<br><br>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿನ ಡಿ.ಸಿ. ಮನ್ನಾ ಜಮೀನನ್ನು ಮಂಜೂರು ಮಾಡಲು ಬಾಕಿ ಇರುವ ಅರ್ಜಿಗಳ ವಿವರ ಈ ಕೆಳಕಂಡಂತಿವೆ:-<br>**ದಕ್ಷಿಣ ಕನ್ನಡ:-** |

| ಕ್ರ.ಸಂ | ತಾಲೂಕು | ಬಾಕಿ ಅರ್ಜಿಗಳ ಸಂಖ್ಯೆ: |
|---|---|---|
| 1 | ಮಂಗಳೂರು | 3728 |
| 2 | ಮೂಡಬಿದ್ರೆ | 194 |
| 3 | ಮುಲ್ಕಿ | 235 |
| 4 | ಬಂಟ್ವಾಳ | 550 |
| 5 | ಉಳ್ಳಾಲ | 351 |
| 6 | ಕಡಬ | 9 |
| 7 | ಸುಳ್ಯ | 0 |
| 8 | ಬೆಳ್ತಂಗಡಿ | 269 |
| 9 | ಪುತ್ತೂರು | 28 |
| | **ಒಟ್ಟು** | **5364** |

**ಉಡುಪಿ ಜಿಲ್ಲೆ:-**

| ಕ್ರ.ಸಂ | ತಾಲೂಕು | ಬಾಕಿ ಅರ್ಜಿಗಳ ಸಂಖ್ಯೆ: |
|---|---|---|
| 1 | ಕುಂದಾಪುರ | 55 |
| 2 | ಉಡುಪಿ | 0 |
| 3 | ಕಾರ್ಕಳ | 94 |
| 4 | ಬ್ರಹ್ಮಾವರ | 0 |
| 5 | ಬೈಂದೂರು | 18 |
| 6 | ಕಾಪು | 58 |
| 7 | ಹೆಬ್ರಿ | 84 |
| | **ಒಟ್ಟು** | **309** |

ಕೊಡಗು ಜಿಲ್ಲೆಯಲ್ಲಿ ಡಿ.ಸಿ. ಮನ್ನಾ ಜಮೀನು ಇರುವುದಿಲ್ಲವಾದ ಕಾರಣ ಅನ್ವಯಿಸುವುದಿಲ್ಲ.

(ಕಡತ ಸಂಖ್ಯೆ:ಆರ್‌ಡಿ 107 ಎಲ್‌ಜಿಎ 2024)

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು